


**ಚಿಂತನಾರ್ಹ**

‘ಮಕ್ಕಳಿಗೇಕೆ ಮೊಬೈಲ್?’, ಸವಿತಾ ಶಾಂತಪ್ರಿಯ ಅವರ ಮುಖಪುಟ ಲೇಖನ (ಸುಧಾ, ಜುಲೈ 13) ಚಿಂತನಾರ್ಹ. ಪೋಷಕರು ಈ ಲೇಖನವನ್ನು ಸರಿಯಾಗಿ ಓದಬೇಕು. ಮಕ್ಕಳಿಗೆ ಮೊಬೈಲ್ ಬೇಡವೇ ಬೇಡ. ಅವರಿಗೆ ಈಗಿನ ಪರಿಸ್ಥಿತಿಯಲ್ಲಿ ಬೇಕಾಗಿರುವುದು ಉತ್ತಮ ಸ್ನೇಹಿತರು, ಹೆಚ್ಚು ಹೊತ್ತು ಅವರೊಂದಿಗೆ ಕಳೆಯುವ ಪೋಷಕರು ಅಲ್ಲದೆ ಪಠ್ಯೇತರ ಚಟುವಟಿಕೆಗಳು, ಆಸಕ್ತಿಯ ಪುಸ್ತಕಗಳು.

—ಸು.ವಿಜಯಲಕ್ಷ್ಮಿ ಶಿವಮೊಗ್ಗ, ಮೇ.ಗೋ. ಸುಬ್ಬಣ್ಣ ಮೇಗರವಳ್ಳಿ, ಬಿ.ಎಂ.ಶಿವಲಿಂಗೇಗೌಡ ಬೇವಿನಹಳ್ಳಿ, ಬೆಳ್ಳಾವೆ ರಮೇಶ್ ಬೆಂಗಳೂರು, ಅಮೃತೇಶ್ ತಂಡರ ಅಣ್ಣಿಗೇರಿ, ಪಿ. ಗೋವಿಂದರಾಜ್ ಶಿವಮೊಗ್ಗ, ಕೊಹಿಮ ಬಸರಕೋಡು, ಮೀನಾಕ್ಷಿ ಕೆ. ರಾಮಗುಂಡಿ ಬೈಲಹೊಂಗಲ, ಶ್ರೀನಾಥ್ ಕೊನೇಟಿ ಬೆಂಗಳೂರು, ರುಕ್ಮಿಣಿ ಕೃ.ದೇಶಪಾಂಡೆ ಗೋಕಾಕ, ಎಸ್.ವಿಜಯಕುಮಾರಿ ಬೆಂಗಳೂರು, ಎಚ್.ಆನಂದಕುಮಾರ್ ಚಿತ್ರದುರ್ಗ, ರಾಜೀವ್ ಎನ್. ಮಾಗಲ್ ಸಕಲೇಶಪುರ, ದೇವಿದಾಸ ಸುವರ್ಣ ಅಂಕೋಲಾ, ಮಧುರ ಸುಬ್ರಹ್ಮಣ್ಯ ಬೆಂಗಳೂರು, ಬಾಳ್ಳುಪೇಟೆ ನೀಲಕಂಠಪ್ಪ ಹಾಸನ

**ಉಪಯೋಗ ತಿಳಿಸಿ**

ಈಗಿನ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಮೊಬೈಲ್ ಬಳಕೆ ಅವಶ್ಯಕವಾಗಿದೆ. ಇದರಿಂದ ಬಹಳ ಉಪಯೋಗ ಇದೆ (ಅಪಾಯವೂ ಇದೆ). ಅಂತರ್ಜಾಲದಿಂದ ಮಕ್ಕಳು ಯಾವ ಒಳ್ಳೆಯ ಅಂಶಗಳನ್ನು ಹುಡುಕಬೇಕು ಎಂಬುದನ್ನು ಪೋಷಕರು ಹೇಳಿಕೊಡಬೇಕು ಹಾಗೂ ಸಾಮಾಜಿಕ ಜಾಲತಾಣಗಳಿಂದ ಆಗುವ ಅಪಾಯವನ್ನೂ ತಿಳಿಸಬೇಕು.

—ಗಾಣಧಾಳು ರಾಮಣ್ಣ ಚಿತ್ರದುರ್ಗ

> **ಯಾರಿಗೆ..?**
>
> ‘ಮಕ್ಕಳಿಗೇಕೆ ಮೊಬೈಲ್?’ ಪ್ರಶ್ನೆ ಇರಬೇಕಾದ್ದು ಹೀಗೆ.. ‘ದೊಡ್ಡವರಿಗೇಕೆ ಮೊಬೈಲ್?’ (ಅವರೂ ಒಂದು ರೀತಿಯಲ್ಲಿ ಮಕ್ಕಳೇ ಎಂಬುದು ಉತ್ತರ..!
>
> —ಸಿ.ಪಿ.ಕೆ. ಮೈಸೂರು

**ಸಾರ್ವಕಾಲಿಕ ಸತ್ಯ**

ವಿಚಾರ ಲಹರಿಯಲ್ಲಿ ‘ಸೌಹಾರ್ದ’ ದ ಬಗ್ಗೆ (ತೋಪ) ಬರೆದ ವಿಚಾರ ಸಕಾಲಿಕ ಹಾಗೂ ಸಾರ್ವಕಾಲಿಕ ಸತ್ಯ. ಪೇಜಾವರ ಶ್ರೀಗಳ ‘ಸಹಿಷ್ಣುತೆ’ ಎಂಬ ಪದದ ಅರ್ಥ ಅವರ ಹೃದಯ ವೈಶಾಲ್ಯತೆಯನ್ನು ಎತ್ತಿತೋರಿಸುತ್ತದೆ.

—ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ

**ಬೇಸರವೆನಿಸಿತು**

ಪೇಜಾವರ ಶ್ರೀಗಳು ಒಳ್ಳೆಯ ಉದ್ದೇಶದಿಂದ ಮಾಡಿದ ಕಾರ್ಯಕ್ಕೆ ‘ಮೊಸರಲ್ಲಿ ಕಲ್ಲು ಹುಡುಕಿದಂತೆ’ ಎಂದು ಬರೆದದ್ದಕ್ಕೆ ಬೇಸರವೆನಿಸಿತು. ಶ್ರೀಗಳ ಬಗೆಗಿನ ಅಸಹನೆ ಏಕೆ ಎಂದು ಅರ್ಥವಾಗುತ್ತಿಲ್ಲ.

—ಬಿಲ್ಲೇಶ್ವರ ಅಚ್ಚು ಹುಂಚ

**ಪ್ರಸ್ತುತ**

‘ನಿಮ್ಮೊಡನೆ’ಯಲ್ಲಿ ‘ಶಾಲೆಗಳಲ್ಲಿ ಮೊಬೈಲ್ ನಿರ್ಬಂಧ’ (ರಘುನಾಥ ಚ.ಹ.) ಬರಹ ಪ್ರಸ್ತುತ.

—ಮಹಾವೀರ ಕಾಸರ ಶಿವಮೊಗ್ಗ, ಬಿ.ಎಸ್.ಎನ್.ರಾವ್ ಮಂಡ್ಯ

**ಕಣ್ಮನ ಸೆಳೆಯಿತು**

ಪ್ರವಾಸ ಕಥನ ‘ಪ್ರಕೃತಿಯ ವಿಸ್ಮಯ ಲ್ಯೂರೆ ಗುಹೆಗಳು’ (ಎಸ್.ಎಂ. ಜಂಬುಕೇಶ್ವರ) ಬರಹ ಹಾಗೂ ಅದರೊಂದಿಗಿನ ವರ್ಣಚಿತ್ರ ಕಣ್ಮನ ಸೆಳೆಯಿತು.

—ಸುಂದರ್ ಬೆಂಗಳೂರು, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

**ಆಸಕ್ತಿದಾಯಕ ಲೇಖನ**

‘ಮಾಲ್ಗುಡಿ ಕರ್ತನ ಮನೆಯೇ ಸ್ಮಾರಕ’ (ಎಂ.ಎಸ್. ರಘುನಾಥ್) ಆಸಕ್ತಿದಾಯಕ ಲೇಖನ. ಆರ್.ಕೆ.ನಾರಾಯಣ್ ಅವರು ಪ್ರೌಢಶಾಲೆಯಲ್ಲಿ ಫೇಲ್ ಆಗಿದ್ದರೆಂದು ಇದರಲ್ಲಿ ಹೇಳಲಾಗಿದೆ. ವಾಸ್ತವವಾಗಿ ಅವರು ಫೇಲಾದದ್ದು ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆಯಲ್ಲಿ. ಅದೂ ಎರಡು ಬಾರಿ! ಮೊದಲು ಇಂಗ್ಲಿಷ್‌ನಲ್ಲಿ, ನಂತರ ತಮಿಳಿನಲ್ಲಿ. 1926ರಲ್ಲಿ ಪಾಸಾಗಿ ಮಹಾರಾಜ ಕಾಲೇಜು ಸೇರಿದರು. ಪದವಿಯನ್ನೂ ಒಮ್ಮೆಗೇ ಮುಗಿಸಲಾಗಲಿಲ್ಲ. 1930ರಲ್ಲಿ ತಮ್ಮನೊಡನೆ ಪದವೀಧರರಾದರು. ಇದು ನಮ್ಮ ಪರೀಕ್ಷಾ ಪದ್ಧತಿಯ ವ್ಯಂಗ್ಯವೂ ಹೌದು.

—ಡಾ.ಟಿ.ಎನ್. ಗುರುದತ್ ಬೆಂಗಳೂರು, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಮುಕುಂದ ಹೆರಕಲ್ಲ ಕಲಬುರಗಿ

**ಉತ್ತಮ ಕಥೆ**

‘ಕಥೆಯ ಕಥೆ’ (ಡಿ.ಎನ್.ಶ್ರೀನಾಥ್) ನೇಪಾಳಿ ಕಥೆ ಓದುಗರನ್ನು ಕಾತುರದಿಂದ ಓದುವಂತೆ ಮಾಡಿದ ಉತ್ತಮ ಕಥಾ ಹಂದರ.

—ಕೆ.ಪಿ. ರಾಮಗುಂಡಿ ಬೈಲಹೊಂಗಲ

**ಬಹುರೂಪಿ ಬಾಳೆನಾರು**

‘ಬಹುರೂಪಿ ಬಾಳೆನಾರು’ (ಹರೀಶ್ ಹಳೆಮನೆ) ಲೇಖನ ಉಪಯುಕ್ತ. ತೆಂಗು ಹಾಗೂ ಹಲಸಿನಂತೆ ಬಾಳೆ ಕೂಡ ಬಹುರೂಪಿ ಸಸ್ಯವಾಗಿದೆ.

—ನರೇಂದ್ರ ಸಿರಕಜೆ ಮೈಸೂರು, ಬಿ.ಎಂ.ಎಸ್. ಬೇವಿನಹಳ್ಳಿ

**ಪೋಷಕರು ಓದಿ**

‘ಮೆಸೇಜುಗಳಿವೆ ಎಚ್ಚರಿಕೆ!’ (ಉದಯರವಿ ಶಾಸ್ತ್ರೀ) ಲೇಖನ ಪೋಷಕರು ಓದಲೇಬೇಕು.

—ರತ್ನಾಕರ ಹೆಗಡೆಕಟ್ಟೆ ಮೂಡಬಿದರೆ, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ

**ಮುದ ನೀಡಿತು**

‘ಸ್ವಿಸ್ ಪರ್ವತ ಶ್ರೇಣಿಯ ಮೇಲೆ’ (ಎಸ್.ಆರ್.ದೇವಪ್ರಕಾಶ್) ಚಿತ್ರಲೇಖನ ಮನಸ್ಸಿಗೆ ಮುದ ನೀಡಿತು.

—ರಾಜಶೇಖರ ಹಾದಿಮನಿ ಧಾರವಾಡ


# ವಶೀಕರಣ ಸ್ಪೆಷಲಿಸ್ಟ್



**ಶ್ರೀಯುತ ಮಂಜುನಾಥ ಗುರೂಜಿಯವರಿಂದ**

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನ್ನು ಸಾಧಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ **“ಶ್ರೀ ಮಂಜುನಾಥ ಗುರೂಜಿ”** ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಬಾಧೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ **ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.**

**ವಿಶೇಷ ಸೂಚನೆ:** ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.

ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

**ಶ್ರೀ ಮಂಜುನಾಥ ಗುರೂಜಿ**

**9886999747**